PAPERS LAID ON THE TABLE

Sri VEERENDRA PATIL (Minister for Public Works).—Sir, I beg to lay on the Table of the House copies of the agreement entered into with the Madras Government on the supply of power to that State and latest Power Tariffs as promised in reply to Starred Question No. 22 (Sl. No. 181) by Sri H. Siddaveerappa on 14th March 1968 *

Member's Representation

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ಒಂದು ವಿಷಯ ತರುತ್ತೇನೆ. ಮಹಾಜನ್ ಕಮಿಷನ್ ವರದಿ ಪ್ರಕಾರ ಅಕ್ಕರ್‌ಕೋಟ ನಮ್ಮಲ್ಲಿರತಕ್ಕಂತಹ ಪ್ರದೇಶ. ಅಲ್ಲಿರತಕ್ಕ ಕನ್ನಡ ಸ್ಕೂಲುಗಳನ್ನು ಮುಚ್ಚಿ ಇವತ್ತಿನ ದಿವಸ ಮರಾಠಿ ಸ್ಕೂಲುಗಳನ್ನು ತೆರೆಯಬೇಕೆಂದು ಮರಾಠಿಯವರು ತೀರ್ಮಾನ ಮಾಡಿದ್ದಾರೆ. ಇದರಲ್ಲಿ ನಮ್ಮ ನರ್ಕಾರದವರ ನಿಲುವು ಏನೆಂದು ತಿಳಿಸಬೇಕು, ಸ್ವಾಮಿ.

(ಗೊಂದಲ—ಗಲಾಟೆ)

ಉಪಾಧ್ಯಕ್ಷರು.— ಶ್ರೀ ವಾಟಾಳ್ ನಾಗರಾಜ್ ಮತ್ತು ಬಿ. ಪಿ. ಗಂಗಾಧರ ಅವರ ಮಾತು ಗಳನ್ನು ಬರೆದುಕೊಳ್ಳಬಾರದು ಎಂದು ಆಜ್ಞೆಮಾಡುತ್ತೇನೆ.

* * * *

Sri H. D. Deve Gowda wanted to ask certain clarifications to his Calling Attention. He may have it.

ಶ್ರೀ ಎಚ್. ಡಿ. ದೇವೇಗೌಡ.—ಅಡ್ ಹಾಕ್ ಗ್ರಾಂಟ್ ಮಂಜೂರು ಮಾಡುತ್ತೇವೆಂದು ಹೇಳಿದಿರಿ. ಈ ಗ್ರಾಮದಲ್ಲಿ ಕೂಡ ಕುಡಿಯುವ ನೀರು ಇಲ್ಲ. ನಾಲ್ಕು ಮೈಲಿ ಮೇಲಿಂದ ಗಾಡಿಯಲ್ಲಿ ನೀರು ತರುತ್ತಾರೆ. 3,000 ಜನ ವಸತಿ ಇರತಕ್ಕ ಇದು ಒಂದು ದೊಡ್ಡ ಗ್ರಾಮ. ಆದುದರಿಂದ ಆದಷ್ಟು ಜಾಗ್ರತೆ ಮಂಜೂರು ಮಾಡಿ ರಿಲೀಫ್ ವರ್ಕ್ಸ್ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಈ ಪಂಚಾತಿಯಿಂದ ಬರಬೇಕಾದ ಬಾಕಿ ಹಣ ಇದೆ. ಇಂಥ ಒಂದು ಪಂಚಾಯತಿಗೆ ಕೊಟ್ಟರೆ ರಾಜ್ಯದಲ್ಲಿರುವ ಅನೇಕ ಡಿಫಾಲ್ಟರ್ ಪಂಚಾತಿಗಳಿಗೆ ಕೊಡ ಬೇಕಾಗಿ ಬಂದು ಕಷ್ಟವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.— ಈ ಪ್ರದೇಶದಲ್ಲಿ ಯಾವಾಗಲೂ ಅಭಾವ ಪರಿಸ್ಥಿತಿ ಇರುವುದ ರಿಂದ ರಿಯಾಯಿತಿ ಕೊಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.— ಈ ಪಂಚಾಯತಿ ಹತ್ತು ವರ್ಷದಿಂದ ಡಿಫಾಲ್ಟರ್ ಆಗಿದೆ. ಡ್ಯೂಸ್ ಇದೆ. ರಿಕವರಿಯಾಗಿಲ್ಲ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೋಳ).—ಅಭಾವ ಪರಿಸ್ಥಿತಿ ಇರುವ ಪ್ರದೇಶದಲ್ಲಿ ಕೊಟ್ಟಿ ದ್ದೀರಿ. ಅದನ್ನು ತೋರಿಸಿ ತಮ್ಮ ಗಮನಕ್ಕೆ ತಂದರೆ ಇದಕ್ಕೂ ಕೊಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಆ ರೀತಿ ಕೊಟ್ಟಿಲ್ಲ. ನಮ್ಮ ಗಮನಕ್ಕೆ ಬಂದಿಲ್ಲ.

---

*Copy placed in the Mysore Legislature Library *vide* No. 30, dated 28th March 1968.

**** The matter not recorded as ordered by the Chair.

Sri H. SIDDAVEERAPPA. (Harihar).—While thanking the Hon'ble Minister for being kind enough to place this agreement on the Table of this House according to my request, may I bring to his notice that this agreement has been less favourable to us when compared to the previous agreement. Be that as it may, according to clause, there is one salient feature about it—that the time is limited only for one year. In future before any agreement is renewed, I would request most earnestly the Government to see that such commitments are brought to the notice of this House and prior approval of the House is taken before such agreements are entered into because when once they enter into, they are likely to create a priority right as it were. I would like to know the reaction of the Minister.

Sri VEERENDRA PATIL.—My reaction to the suggestion made by Sri Siddaveerappa is that it is not practicable to bring every matter before the Assembly and seek the approval of the House before finalising the agreement. I know and it is obvious that the agreement we have now signed with Madras is not favourable because when we signed the first agreement we agreed to supply at 9 paise. Now it is 5 paise and 4.5 paise. It is quite obvious that it is not favourable. But what we must know is, under what circumstance we have entered into that agreement. The Madras Government did not approach the State Government for supply of electricity. On the contrary last time when they wanted power, they approached us. But this time they said that they were in a comfortable position and they do not want any supply. We were in surplus of power. So, instead of wasting it, we thought that we could prevail upon them to shut down their thermal station and take from us. When we asked them to stop their thermal station they said that at whatever cost they are generating power there with a little incentive if we are prepared to offer power they are agreeable to take. So we had a discussion and the Planning Commission had to intervene and after a thorough discussion we have entered into this agreement. We are not incurring any loss. On the other hand this year, that is in this calendar year we may get more than two crores by way of supply of power, which would have otherwise been wasted.

Sri H. SIDDAVEERAPPA.—I see the point that it is not the sellers 'market but buyers' market. My extreme anxiety is, if the agreement is to continue for a long period, say 10 years or 15 years, you are going to mortgage the rights of the people. I am anxious only on that point. Atleast if you give an assurance in the House that these agreements if at all necessary are renewable annually instead of fixing a longer period, I will be satisfied.

Sri VEERENDRA PATIL.—The period is only one year renewable at the instance of the Madras Government. If the Madras Government wants it to be renewed it will be renewed. As it is, it is only for one year. If I may take the House into confidence I may say that we were anxious to have the period for three years because most of the members are not in the knowledge of the fact that Kerala is also surplus in

(SRI VEERENDRA PATIL)

power. They are constructing their transmission lines and have a grid with Madras very soon and when they are going to have it, there will be one more competitor to Mysore. To-day we are the only State who can supply power in bulk to Madras Government and within a couple of months there will be another State which will be in a position to supply power. When that was the state of affairs we wanted this should be for three years but they said that it could be only for one year and after one year they would see.

Sri H. SIDDAVEERAPPA.—That again raises further issues. During the discussion of the Demand, I did not like to say any word. When the question is taken up we have to say something that the very fact that these gentlemen are selling power like any other raw material shows their utter bankruptcy in the administration of the State because no State in the world sells power like this. Even a country like France which produces 20 times more than here, whenever other nations want, they won't give. That shows if only we had developed our agriculture we could have utilised all this.

Sri RAMAKRISHNA HEGDE (Minister for Finance and Planning).—I also know some thing about the world. To-day Switzerland supplies to West Germany large quantity of electric power. Here, I need not supplement to what my collegue has said. It is not only a question of impracticability but also a question which is of greater importance, namely, when there are other States who are competing with Mysore to supply surplus power, it will not be advisable to bring this matter before the House for a discussion and place all our cards on the Table because the other competing State may take advantage of it. The members of the House may have sufficient confidence in us. We are not here to do any thing detrimental to the interest of the State. We shall take all precautions. When we agreed to sell power, we have taken into consideration the factors that are likely to come—what is the surplus to-day what is the requirement of power in our own State during the next one or two or three years, what is the potentiality that has been created for consumption of power and what is the cost of power. These are the factors which we have taken into consideration before coming to the final agreement with another State.

To-day actually it is not the occasion when I have to make a statement. But this matter may be of importance from All-India context. The Planning Commission has approved the expansion, if my information is correct, of Neiyveli Project, the cost of production of which is much more than any other produced by hydro-electric process. That is not advisable now in the interest of the nation. We have been protesting that when there is any surplus in a State in the country it can be utilised for the benefit of the whole nation. Therefore I can assure the members that we on this side are not such people who would barter away the interests of the State.

ಶ್ರೀ ಎಸ್. ಶಿವಪ್ಪ.—ಮಾನ್ಯ ಹಣಕಾಸಿನ ಸಚಿವರು ಕೊಟ್ಟ ಹೇಳಿಕೆಯ ಮುಖಾಂತರವಾಗಿ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಇವರ ಆರ್ಥಿಕ ನೀತಿ ಸರಿಯಾಗಿಲ್ಲ, ಹೆಚ್ಚು ಹಣವನ್ನು ಕೇಂದ್ರದಿಂದ ತಂದು ಶರಾವತಿಯಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ನಮ್ಮಲ್ಲಿಯೇ ಉಪಯೋಗಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಬೇರೆ ರಾಜ್ಯಗಳನ್ನು ಅಂಗಲಾಚಿ ಬೇಡಿಕೊಳ್ಳುತ್ತಿದ್ದಾರೆ. ಹಾರಂಗಿ, ಹೇಮಾವತಿ, ಕೃಷ್ಣ ಈ ಯೋಜನೆಗಳಿಗೆ ಹೆಚ್ಚು ಹಣವನ್ನು ಕೇಂದ್ರದಿಂದ ಕೊಡಬೇಕೆಂದು ಒತ್ತಾಯ ಮಾಡತಕ್ಕ ಶಕ್ತಿ ಇಲ್ಲ. ನಮ್ಮ ಸರ್ಕಾರದವರೂ ಒತ್ತಾಯ ಮಾಡಿ ರಾಜ್ಯದಲ್ಲಿ ಆಗಬೇಕಾದ ದೊಡ್ಡ ನೀರಾವರಿ ಕೆಲಸಗಳಿಗೆ ಕೇಂದ್ರದಿಂದ ಹಣವನ್ನು ತರಬೇಕಾಗಿದೆ. ಭಿಕ್ಷೆ ಬೇಡುವುದಕ್ಕೆ ಹೋದರೆ ಅವರು ಕೊಡುತ್ತಾರೆಯೇ, ಸ್ವಾಮಿ? ಖಂಡಿತವಾಗಿ ಕೊಡುವುದಿಲ್ಲ. ಅವರ ಮೇಲೆ ಒತ್ತಾಯವನ್ನು ತರಬೇಕು. ಆಗ ಮಾತ್ರ ಕೊಡುತ್ತಾರೆ.

EIGHTH REPORT OF THE BUSINESS ADVISORY COMMITTEE

Mr. DEPUTY SPEAKER.—I present the Eighth Report of the Business Advisory Committee. I think the members agree to it.

HON'BLE MEMBERS.—Yes.

Notice of Adjournment Motion given by Sri M. Nagappa

ಶ್ರೀ ಎಂ. ನಾಗಪ್ಪ (ರಾಯಚೂರು).—ನಾನು ಸಭೆಯಲ್ಲಿ ಒಂದು ನಿಲುವಳಿ ಸೂಚನೆಯನ್ನು ತಂದಿದ್ದೇನೆ, ಸ್ವಾಮಿ. ಆ ವಿಷಯ ಏನೆಂದರೆ, ಈ ದಿವಸದ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಆಂಧ್ರದ ಮಾನ್ಯ ಮುಖ್ಯಮಂತ್ರಿಗಳಾದ ಕೆ. ಬ್ರಹ್ಮಾನಂದರೆಡ್ಡಿಯವರು ಆಂಧ್ರ ಪ್ರದೇಶ ಅಸೆಂಬ್ಲಿಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಒಂದು ಉತ್ತರವನ್ನು ಕೊಟ್ಟಿದ್ದಾರೆ ಎಂದು ಬಂದಿದೆ. ಕೃಷ್ಣ, ಗೋದಾವರಿ ನೀರಿನ ಬಗ್ಗೆ ಸಂಬಂಧಪಟ್ಟ ಸರ್ಕಾರದವರು ನೋಟೀಸ್ ಕೊಟ್ಟಿದ್ದಾರೆಯೋ ಏನೋ ಎಂದು ಕೇಳಿದರೆ ಏನೋ ಒಂದು ರಾಂಗ್ ರೇಂಜ್ ಷೂಟಿಂಗ್ (Long Range Shooting) ಇದೆ. ಅದರಲ್ಲಿ ಯಾವ ತರಹ ಸತ್ಯಾಂಶವಿಲ್ಲ ಎನ್ನುವ ವಿಷಯವನ್ನು ಅವರು ಹೇಳುತ್ತ ವಾಸ್ತವಿಕವಾಗಿ ನಾವು ಮಾಡತಕ್ಕದ್ದೆಲ್ಲ ಡಾಲು ಇದೆ. ಅವರಿಗೆ ಯಾವ ತರಹ ಕೇನೂ ಸಬ್‌ಸ್ಟಾನ್‌ಷಿಯರ್ ಆಗಿ ಇಲ್ಲ ಎಂದು ಸೂಚಿಸಿದ್ದಾರೆ. ಈ ಹೇಳಿಕೆಯನ್ನು ನಾವು ಓದಿದರೆ ಅದು ಸತ್ಯವಾದುದೇನೋ ಎನ್ನುವ ಭಾವನೆ ನಮ್ಮ ಗಮನಕ್ಕೆ ಬರುತ್ತದೆ.

Mr. DEPUTY SPEAKER.—We have been discussing the P.W.D. Demand. I will give Sri Nagappa a chance. when he can refer to these things.

2-30 P.M.

ಶ್ರೀ ಎಂ. ನಾಗಪ್ಪ.—30ನೆಯ ತಾರೀಖು ಅಕ್ಟೋಬರ್ 1967ಕ್ಕೆ ನೋಟೀಸು ಕೊಡುತ್ತೇವೆಂದು ಒಂದು ಹೇಳಿಕೆ ಕೊಟ್ಟಿದ್ದರು. ಅವರು ಒಪ್ಪದಿದ್ದರೆ ಯಾವ ಕ್ರಮ ಕೈಗೊಳ್ಳಬೇಕೋ ಅದನ್ನು ಕೈಕೊಳ್ಳುತ್ತೇವೆ ಎಂದು ತಿಳಿಸಿದ್ದರು. ಇದನ್ನು ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ತಿಳಿಸಿದ್ದರು. ಆದರೆ ಅದರಂತೆ ನಡೆದುಕೊಂಡಿರುವುದಿಲ್ಲ. ಇದು ಬಹಳ ಅವಶ್ಯವಾದ ವಿಚಾರವಾಗಿರುವುದರಿಂದ ಈ ದಿವಸ ನಾನು ಕಳುಹಿಸಿರುವ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಎರಡನೆಯದಾಗಿ ಇಂಥ ವಿಷಯವನ್ನು ನಿಲುವಳಿ ಸೂಚನೆಯ ರೂಪದಲ್ಲಿ ಹಿಂದೆ ತಂದಾಗ ಸಭೆಯ ಮುಂದೆ ಅದಕ್ಕೆ ಸಂಬಂಧಪಟ್ಟ ಯಾವುದಾದರೂ ವಿಷಯವಿದ್ದರೆ ಅದರ ಮೇಲೆ ಮಾಡಬಹುದಾಗಿ ತಿಳಿಸಬಹುದು ಎಂದು ತಿಳಿಸಿದ್ದರು. ಜ್ಯೋತಾ ಸೂಚನೆಗಳನ್ನು ಕೊಟ್ಟಾಗ ಕೂತ